# ಸಾಮವೇದ ಸಂಹಿತೆಯ ಅಭಿನಂದನೆ

ಯೋ ಬ್ರಹ್ಮಾಣಂ ವಿದಧಾತಿ ಪೂರ್ವಂ ಯೋ ವೈ ವೇದಾಂಶ್ಚ ಪ್ರಹಿಣೋತಿ ತಸ್ಮೈ ।
ತಗ್ಂ ಹ ದೇವಮಾತ್ಮಬುದ್ಧಿಪ್ರಸಾದಂ ಮುಮುಕ್ಷುರ್ವೈ ಶರಣಮಹಂ ಪ್ರಪದ್ಯೇ ॥ ಶ್ವೇ.ಉ. ೬.೧೮ ॥

ವೇದಗಳ ಬಗ್ಗೆ ಆಸಕ್ತಿ ಅರಿವುಗಳು ಕಡಿಮೆಯಾಗುತ್ತಿರುವ ಆಧುನಿಕ ಸಮಯದಲ್ಲಿ ವೇದಗಳ ಪೈಕಿ ಕಡಿಮೆ ಸಂಖ್ಯೆಯಲ್ಲಿ ಸಿಗುವ ಸಾಮಗರ ಉಪಕಾರಕ್ಕಾಗಿ ಪ್ರಧಾನವಾಗಿಯೂ, ಇತರ ಶಾಖೆಗಳ ಜ್ಞಾನಾಭಿವೃದ್ಧಿಗಾಗಿಯೂ **'ದ್ರಾಹ್ಯಾಯಣ ಪ್ರತಿಷ್ಠಾನ'**ವು ಬಹಳ ಸ್ತುತ್ಯರ್ಹವಾದ ಸೇವೆಯನ್ನು ಸಲ್ಲಿಸುತ್ತಿರುವುದು ಸರ್ವವಿದಿತವಷ್ಟೆ. ಪ್ರತಿಷ್ಠಾನದಿಂದ ಈ ಹಿಂದೆ ಹೊರಬಂದಿರುವ ಅನೇಕ ಪುಸ್ತಕಗಳಿಗಿಂತ ಪ್ರಸ್ತುತ ಪ್ರಕಾಶಿತವಾಗುತ್ತಿರುವ **'ಸಾಮವೇದ ಸಂಹಿತೆ'** - ಸಮಗ್ರ ಮೂಲ, ಪದಪಾಠ, ಸಾಯಣ ಭಾಷ್ಯ ಹಾಗೂ ವಿಸ್ತೃತ ಕನ್ನಡಾನುವಾದದೊಡನೆ - ಕನ್ನಡ ಭಾಷೆಯಲ್ಲಿ ಮೊದಲಸಲವಾದ್ದರಿಂದಲೂ, ಬಹಳ ಶ್ರದ್ಧಾಪೂರ್ವಕವಾಗಿ, ಅಚ್ಚುಕಟ್ಟಾಗಿ ಹೊರಬರುತ್ತಿರುವುದರಿಂದಲೂ ಬಹಳ ಸ್ವಾಗತಾರ್ಹವಾಗಿದೆ.

ಇದು ಐದು ಸಂಪುಟಗಳಲ್ಲಿ ಸಂಪೂರ್ಣವಾಗುವಂತೆ ಯೋಜಿಸಲ್ಪಟ್ಟಿದ್ದು ಇದೀಗ ಮೊದಲ ಸಂಪುಟ ಹೊರಬರುತ್ತಿದೆ. ಈ ಸಂಪುಟದಲ್ಲಿ ವಿಶೇಷವಾಗಿ ಪ್ರಸ್ತಾವನೆಯಲ್ಲಿ, ಸಾಮವೇದದ ಅನೇಕ ಅಂಶಗಳ ಬಗ್ಗೆ ಪ್ರಮಾಣಪುರಸ್ಸರವಾಗಿ ವಿಶದವಾದ ವಿವರಣೆ ನೀಡಲಾಗಿದೆ. ಸಾಯಣಭಾಷ್ಯ ಸಹಿತವಾದ ಸಾಮವೇದ ಸಂಹಿತೆಯ ಮೂಲ ನಾಗರೀ ಮತ್ತು ಗ್ರಂಥಲಿಪಿಗಳಲ್ಲೂ, ಪದ, ಭಾಷ್ಯಗಳು ನಾಗರೀಲಿಪಿಯಲ್ಲಿ ಮತ್ತು ಪ್ರತಿಪದಾರ್ಥ, ತಾತ್ಪರ್ಯ ಮತ್ತು ಭಾಷ್ಯದ ಅನುವಾದ ತಮಿಳು ಭಾಷೆಯಲ್ಲಿ ಸುಮಾರು ನೂರು ವರ್ಷಗಳ ಹಿಂದೆ ಮುದ್ರಿತವಾಗಿದೆ. ಸಂಸ್ಕೃತೇತರ ಭಾಷೆಗಳಲ್ಲಿ ಆಂಗ್ಲ, ಹಿಂದಿಗಳ ನಂತರ ಇದೀಗ ಕನ್ನಡಾನುವಾದ ಬರುತ್ತಿದೆ ಎಂಬುದು ಗಮನಾರ್ಹ. ಶ್ರೀಮಾನ್ ನಾಗಪ್ಪ ಹಾಗೂ ಶ್ರೀ ಶೇಷಣ್ಣ ಶ್ರೌತಿಗಳು ಪರಂಪರಾಗತ ಪ್ರಕಾಂಡ ಪಂಡಿತರೂ, ಪರಿಶ್ರಮಶೀಲರೂ ಆಗಿರುವುದರಿಂದ ಬಹಳ ಕಾಳಜಿ ವಹಿಸಿ ಬಹಳಷ್ಟು ಮಾಹಿತಿಗಳನ್ನು ಒದಗಿಸಿರುತ್ತಾರೆ.

ಮುದ್ರಣವು ಆಧುನಿಕ ಕಂಪ್ಯೂಟರ್ ಯಂತ್ರದ ಬಳಕೆಯಿಂದ ಆಗಿರುವ ಕಾರಣ ಮುಂದೆ ಅನೇಕ ವಿಧಗಳಲ್ಲಿ ಉಪಯೋಗಕ್ಕೆ ಬರಲು ಅವಕಾಶವಿದೆ. ನಾನು ವೇದಶಾಸ್ತ್ರ ವಾಙ್ಮಯಗಳ ಸಮಗ್ರಕೋಶವೊಂದನ್ನು ಕಂಪ್ಯೂಟರ್ ಮಾಧ್ಯಮದಲ್ಲಿ ರಚಿಸತೊಡಗಿರುವ ಕಾರಣ ಈ ಪ್ರಯತ್ನದ ಪ್ರಯೋಜನವನ್ನೂ ಬಹುಮುಖವಾಗಿ ಬೆಳೆಸಲು ಅವಕಾಶವಿರುವುದನ್ನೂ ಮನಗಾಣುತ್ತೇನೆ. ಉದಾಹರಣೆಗೆ, ಮನ್ತ್ರ, ಪದ, ಋಷಿ, ಛಂದಸ್ಸು, ದೇವತೆ, ವಿನಿಯೋಗ, ವಿಚಾರ, ಭಾಷ್ಯದಲ್ಲಿನ ವಿಶೇಷಗಳು, ಗಾನಕ್ಕೆ ಸಂಬಂಧಿಸಿದ ಅಂಶಗಳು, ವರ್ಣ, ಸ್ವರ, ಉಚ್ಚಾರಣೆ ಮುಂತಾದವಕ್ಕೆ ಸಂಬಂಧಿಸಿದ ವೇದಾಂಗಗಳ ಪ್ರಮಾಣ, ಆಕರ ಮೊದಲಾದವುಗಳ ಸೂಚಿ ನಿರ್ಮಾಣ, ಭಾರತೀಯ ಲಿಪಿಗಳಲ್ಲಿ ಲಿಪ್ಯಂತರಣ, ಹುಡುಕಲು ಸೌಕರ್ಯ, ಹೈಪರ್ ಟೆಕ್ಸ್ಟ್ ಲಿಂಕ್ಸ್, ಪ್ರಮಾಣಗ್ರಂಥಗಳ ಸಮನ್ವಯನ ಮುಂತಾದ ಅನೇಕ ಸೌಲಭ್ಯಗಳನ್ನು ಮುಂದೆ ಏರ್ಪಡಿಸಬಹುದು. ಇವುಗಳು ಪುಸ್ತಕರೂಪದಲ್ಲಿ ಅವಶ್ಯಕವಾದರೂ, ಎಲೆಕ್ಟ್ರಾನಿಕ್ ರೂಪದಲ್ಲಿ ಬಳಸಲು ಇಂದು ವ್ಯವಸ್ಥೆ ಇದೆ. ಇಂಟರ್ನೆಟ್ ಮೂಲಕವಾಗಿಯೂ ಈ ವಿಷಯಗಳ ಜ್ಞಾನ, ವಿಚಾರ ವಿನಿಮಯ ಸಾಧ್ಯವಾಗುತ್ತಿದೆ.

ನಾನು ಈ ಸಂಪುಟದ ಕರಡಚ್ಚನ್ನು ಸಂಪೂರ್ಣ ಓದಿ ನೋಡಿ, ಅದರ ವೈಶಿಷ್ಟ್ಯಗಳ ಬಗ್ಗೆ ಬಹಳ ಸಂತುಷ್ಟನಾಗಿದ್ದೇನೆ ಮತ್ತು ಬೇಗಲೇ ಮತ್ತಿತರ ಸಂಪುಟಗಳ ಬಿಡುಗಡೆಯನ್ನು ನಿರೀಕ್ಷಿಸುತ್ತೇನೆ. ವೇದಾಭಿಮನಿಗಳೂ, ಜಿಜ್ಞಾಸುಗಳೆಲ್ಲರೂ ಈ ಉತ್ತಮ ಪ್ರಯಾಸಕ್ಕೆ ಬೆಂಬಲ ನೀಡಿ ತಮ್ಮ ಆತ್ಮಕ್ಷೇಮವನ್ನು ಪಡೆದುಕೊಳ್ಳಲೆಂದು ಆಶಿಸುತ್ತೇನೆ.

ಇಂತಿ ಸಜ್ಜನವಿಧೇಯ,

ವೇದವಾರಿಧಿ, ವೇದವಿಜ್ಞಾನ ಶಿರೋಮಣಿ,
ವೈದಿಕಭೂಷಣಂ, ವಾಚಸ್ಪತಿ
ಡಾ|| ಪಿ. ರಾಮಾನುಜಮ್
ಭಾರತೀಯ ಪರಂಪರೆ ಗುಂಪು ಸಂಯೋಜಕರು
ಸಿ-ಡಾಕ್, ಬೆಂಗಳೂರು

೧೪-೧೧-೧೧
ವಿಷು ವರ್ಷ, ನರಕಚತುರ್ದಶಿ
ಬೆಂಗಳೂರು